**ಬೆಂಗಳೂರು** NAAC Accreditation "A" GRADE **ವಿಶ್ವವಿದ್ಯಾಲಯ**

ವಿಷಯ: ಪದವಿ ವಿದ್ಯಾರ್ಥಿಗಳ ಆಂತರಿಕ ಮತ್ತು ಪ್ರಾಯೋಗಿಕ ಆಂತರಿಕ ಅಂಕಗಳನ್ನು ನಿಗದಿತ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸದಿರುವ ವಿದ್ಯಾರ್ಥಿಗಳಿಗೆ ಫಲಿತಾಂಶ ಹಾಗೂ ಅಂಕಪಟ್ಟಿಯನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ದಿನಾಂಕ:05.06.2025 ರಂದು ಜುರುಗಿದ 180ನೇ ಸಿಂಡಿಕೇಟ್ ಸಭೆಯ ನಿರ್ಣಯ.
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:07.07.2025.

ಪ್ರಸ್ತಾವನೆ:-

ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಹಾಗೂ ಬಿ.ಇಡಿ, ಪದವಿಯ ವಿದ್ಯಾರ್ಥಿಗಳ ಆಂತರಿಕ ಮತ್ತು ಪ್ರಾಯೋಗಿಕ ಆಂತರಿಕ ಅಂಕಗಳನ್ನು ಕಾಲೇಜಿನ ಪ್ರಾಂಶುಪಾಲರು ನಿಗಧಿತ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸದೇ ಇರುವುದರಿಂದ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಸಾಧ್ಯವಾಗಿರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಪರೀಕ್ಷಾ ವಿಭಾಗಕ್ಕೆ ಪದೇ ಪದೇ ಭೇಟಿ ನೀಡಿ, ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡಲು ಒತ್ತಾಯಿಸುತ್ತಿದ್ದರಿಂದ ಮಾನ್ಯ ಕುಲಸಚಿವರು (ಮೌ) ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು.

ಸಮಿತಿಯು ಈ ಹಿಂದೆ ವಿದ್ಯಾವಿಷಯಕ ಪರಿಷತ್ತಿನಲ್ಲಿ ಕೈಗೊಂಡ ನಿರ್ಣಯ ಹಾಗೂ ಇತರೆ ಉಲ್ಲೇಖಗಳನ್ನು ಗಣನೆಗೆ ತೆಗೆದುಕೊಂಡು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಲವೊಂದು ವಿಷಯಗಳಿಗೆ ಆಂತರಿಕ ಮತ್ತು ಪ್ರಾಯೋಗಿಕ ಆಂತರಿಕ ಅಂಕಗಳನ್ನು ಸಲ್ಲಿಸದೇ ಇದ್ದರೆ ಆ ವಿದ್ಯಾರ್ಥಿಯ ಹಿಂದಿನ ಹಾಗೂ ಮುಂದಿನ ಎರಡು ಸೆಮಿಸ್ಟರ್ ಪರೀಕ್ಷೆಗಳ ಆಂತರಿಕ ಮತ್ತು ಪ್ರಾಯೋಗಿಕ ಆಂತರಿಕ ಅಂಕಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು ಫಲಿತಾಂಶವನ್ನು ಪ್ರಕಟಿಸಿ ಅಂಕಪಟ್ಟಿಯನ್ನು ಬಿಡುಗಡೆ ಮಾಡುವಂತೆ ಸಮಿತಿಯಲ್ಲಿ ತೀರ್ಮಾನಿಸಲಾಗಿತ್ತು.

> **"ಈ ಸಮಿತಿಯು ವರದಿಯನ್ನು ದಿನಾಂಕ:05.06.2025 ರಂದು ನಡೆದ 180ನೇ ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವರು (ಮೌ) ರವರು ರಚಿಸಿರುವ ಸಮಿತಿಯ ವರದಿಯನ್ನು ಅನುಮೋದಿಸುವಂತೆ ಸಭೆಯಲ್ಲಿ ಮನವಿ ಮಾಡಿಕೊಂಡಲು ಸುಧೀರ್ಘ ಚರ್ಚೆಯ ನಂತರ ಸಭೆಯ ಸರ್ವಾನುಮತದಿಂದ ಅನುಮೋದಿಸಿತು."**

ಅದರಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಆದೇಶಸಂಖ್ಯೆ:ಕು.ಸ(ಮೌ)/2004. ಅ.ಅಂಕ/2025-26, ದಿನಾಂಕ:26.06.2025.**

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸ್ನಾತಕ ಮತ್ತು ಸ್ನಾತಕೋತ್ತರ ಹಾಗೂ ಬಿ.ಇಡಿ ಪದವಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ವಿದ್ಯಾರ್ಥಿಯ ಹಿಂದಿನ ಹಾಗೂ ಮುಂದಿನ ಎರಡು ಸೆಮಿಸ್ಟರ್ ಪರೀಕ್ಷೆಗಳ ಆಂತರಿಕ ಮತ್ತು ಪ್ರಾಯೋಗಿಕ ಆಂತರಿಕ ಅಂಕಗಳ ಸರಾಸರಿಯನ್ನು ವಿದ್ಯಾರ್ಥಿಗಳ ಪರೀಕ್ಷಾ ಪರಿನಿಯಮಾವಳಿ 2011ರ ನಿಯಮ XXX1 (D) 17ರಲ್ಲಿ ತಿಳಿಸಿರುವಂತೆ ರೂ.10.000/- ದಂಡ ಶುಲ್ಕವನ್ನು ಪಾವತಿಸಿದ ನಂತರ ಫಲಿತಾಂಶ ಹಾಗೂ ಅಂಕಪಟ್ಟಿಯನ್ನು ಬಿಡುಗಡೆಮಾಡಲು ಆದೇಶಿಸಲಾಗಿದೆ.

ಆದೇಶದ ಮೇರೆಗೆ

(Seal: Registrar (Evaln) Pareeksha Bhavan, Bangalore University)

ಕುಲಸಚಿವರು (ಮೌಲ್ಯಮಾಪನ)

ಪ್ರತಿಗಳು:-

1. ಮಾನ್ಯ ಕುಲಪತಿಗಳು/ಕುಲಸಚಿವರು ಆಪ್ತ ಕಾರ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ.
2. ಮಾನ್ಯ ವಿತ್ತಾಧಿಕಾರಿಗಳು/ ಆಪ್ತ ಕಾರ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ.
3. ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಸಂಭಂದಪಟ್ಟ ಕಾಲೇಜಿನ ಪ್ರಾಂಶುಂಪಾಲರು.
4. ಕಛೇರಿ ಪ್ರತಿ.